ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 145-149
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕನ್ನಡ ಜಾನಪದ ಸಾಹಿತ್ಯ: ಒಂದು ಅಧ್ಯಯನ

**ಡಾ. ರೋಹಿಣಿ ಹಿರೇಶೆಡ್ಡಿ**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯಪುರ

**Abstract:**

*ಕನ್ನಡ ಜಾನಪದ ಸಾಹಿತ್ಯವು ಕರ್ನಾಟಕದ ಜನಜೀವನ, ಸಂಸ್ಕೃತಿ, ಪರಂಪರೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಪ್ರಮುಖ ಸಾಹಿತ್ಯ ಪ್ರಕಾರವಾಗಿದೆ. ಜನಸಾಮಾನ್ಯರ ಅನುಭವ, ನಂಬಿಕೆ, ಆಚರಣೆ, ಸಂಪ್ರದಾಯ ಮತ್ತು ಜೀವನ ವಿಧಾನಗಳು ಜಾನಪದ ಸಾಹಿತ್ಯದ ವಿವಿಧ ರೂಪಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ಜನಪದ ಗೀತೆಗಳು, ಕಥೆಗಳು, ಗಾದೆಗಳು, ಒಗಟುಗಳು, ಲಾವಣಿಗಳು, ತ್ರಿಪದಿಗಳು ಹಾಗೂ ಪುರಾಣಕಥೆಗಳು ಇದರ ಪ್ರಮುಖ ಪ್ರಕಾರಗಳಾಗಿವೆ. ಇವುಗಳ ಮೂಲಕ ಗ್ರಾಮೀಣ ಬದುಕು, ವೃತ್ತಿ ಸಂಸ್ಕೃತಿ, ಮಹಿಳೆಯರ ಅನುಭವಗಳು, ಧಾರ್ಮಿಕ ನಂಬಿಕೆಗಳು ಮತ್ತು ಸಾಮಾಜಿಕ ಸಂಬಂಧಗಳ ಚಿತ್ರಣವನ್ನು ಕಾಣಬಹುದು. ಆಧುನಿಕತೆಯ ಪ್ರಭಾವದಿಂದ ಜಾನಪದ ಸಾಹಿತ್ಯದ ಕೆಲವು ರೂಪಗಳು ಬದಲಾಗುತ್ತಿದ್ದರೂ, ಅದರ ಸಾಂಸ್ಕೃತಿಕ ಮಹತ್ವ ಮತ್ತು ಜನಪರ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ. ಈ ಲೇಖನವು ಕನ್ನಡ ಜಾನಪದ ಸಾಹಿತ್ಯದ ಸ್ವರೂಪ, ವೈವಿಧ್ಯ, ಸಾಮಾಜಿಕ-ಸಾಂಸ್ಕೃತಿಕ ಮಹತ್ವ ಹಾಗೂ ಸಮಕಾಲೀನ ಪ್ರಸ್ತುತತೆಯನ್ನು ಅಧ್ಯಯನ ಮಾಡುತ್ತದೆ.*

***Keywords:*** *ಕನ್ನಡ ಜಾನಪದ ಸಾಹಿತ್ಯ, ಜನಪದ ಸಂಸ್ಕೃತಿ, ಜನಪದ ಗೀತೆಗಳು, ಜನಪದ ಪರಂಪರೆ, ಜನಜೀವನ.*

**ಪೀಠಿಕೆ**

ನಮ್ಮ ಪ್ರಾಚೀನ ಕಾವ್ಯಗಳಲ್ಲೆಲ್ಲ 'ಜನಪದ'ವೆಂಬ ಶಬ್ಧವು ಗ್ರಾಮ, ಕಡಿಮೆ ಸಂಖ್ಯೆಯ ಜನರು ವಾಸಿಸುವ ಒಂದು ಪ್ರವೇಶ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಸಂಸ್ಕೃತ ಮೂಲದ ಈ ಶಬ್ದವು ಸಾಮಾನ್ಯ ಜನಗಳ, ಅಷ್ಟೇನೂ ದೊಡ್ಡದಲ್ಲದ ಒಂದು ಗುಂಪು ಎಂಬ ಅರ್ಥದಲ್ಲಿಯೂ ಅನೇಕ ಕಡೆ ಬಳಕೆಯಾಗಿದೆ. ಕ್ರಮೇಣ ಈ ಶಬ್ಧದ ಅರ್ಥವೂ ವಿಸ್ತರಿಸಿರುವುದೂ ಉಂಟು. ಒಂದಿಡೀ ರಾಜ್ಯವನ್ನೇ ಜನಪದವೆಂಬ ಶಬ್ದದಿಂದ ಸೂಚಿಸಿರುವುದೂ ಉಂಟು. ಆಂಡಯ್ಯನ 'ಕರ್ನಾಟಕ ಜನಪದದವ ನಾವನೊಲಿದು ಬಣ್ಣಿಸುವಂ' ಎಂಬ ಪ್ರಯೋಗ ಇದಕ್ಕೊಂದು ಉದಾಹರಣೆಯಾಗಿದೆ. ಗ್ರಾಮ, ಗ್ರಾಮಗಳ ಸಮೂಹ, ಅಲ್ಲಿರುವ ಜನಗಳು 'ಜನಪದ'ವಾದರೆ, ಈ ಜನಪದಕ್ಕೆ ಸಂಬಂಧಿಸಿದ ನಂಬಿಕೆ, ಆಚರಣೆ, ಸಂಸ್ಕೃತಿ, ಹಬ್ಬ-ಹರಿದಿನಗಳು, ಒಕ್ಕಲುತನ, ಅವರ ಉಡುಗೆ-ತೊಡುಗೆಗಳು ಜಾನಪದಗಳಾಗುತ್ತವೆ. ಇಂತಹ ಜಾನಪದದಿಂದ ಮೂಡಿ ಬರುವ ಹಾಡು, ಕಥೆ, ಗಾದೆ, ಒಗಟು ಮೊದಲಾದ ಅಂಶಗಳನ್ನು 'ಜಾನಪದ ಸಾಹಿತ್ಯ'ವೆಂದು ಕರೆಯುತ್ತಾರೆ.

***Please cite this article as:*** ರೋಹಿಣಿ ಹಿರೇಶೆಡ್ಡಿ. (2026). ಕನ್ನಡ ಜಾನಪದ ಸಾಹಿತ್ಯ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(3), 145–149

ಸಾಹಿತ್ಯಕ್ಕೂ ಮತ್ತು ಜಾನಪದಕ್ಕೂ ಇರುವ ಸಂಬಂದ ಹೊಕ್ಕಳ ಬಳ್ಳಿಯಷ್ಟು ಗಾಢವಾದದ್ದು, ಸುಮಧುರವಾದದ್ದು. ಯಾವುದೇ ಸಾಹಿತ್ಯ ಕೃತಿಯು ಹುಟ್ಟಿದರೂ ಜನಪದೀಯ ಅಂಶಗಳು ಮಿನುಗುವುದನ್ನು ನೋಡಬಹುದು. ಮಾನವನ ಹುಟ್ಟಿನೊಂದಿಗೆ ಕುಣಿತ ಹುಟ್ಟಿಕೊಂಡಿತು. ಆ ಕುಣಿತವು ನಾಟ್ಯಕ್ಕೆ ಆಗರವೂ ಸಂಗೀತಕ್ಕೆ ಗಂಗೋತ್ರಿಯೂ ಆಯಿತು. ಮೇಲಿನ ಕುಣಿತ ಕ್ರಿಯೆ ಜಾನಪದವಾದರೆ, ಸಂಗೀತ ಕ್ರಿಯೆ ಸಾಹಿತ್ಯವಾಗಿದೆ. ಶಿಷ್ಟ ಸಾಹಿತ್ಯದ ಬೆಳವಣಿಗೆಗೆ ಜಾನಪದ ಸಾಹಿತ್ಯ ಹಲವಾರು ದೃಷ್ಟಿಯಿಂದ ಪ್ರೇರಣೆ ನೀಡಿದೆ.

ಜಾನಪದ ಎನ್ನುವ ಪದ ಇಂಗ್ಲಿಷ್‌ನಲ್ಲಿ Folklore ಎಂಬ ಪದಕ್ಕೆ ಸಮಾನಾರ್ಥಕವಾಗಿ ಬಳಸಿರುವ ಕನ್ನಡ ಪದ. Folklore ಎನ್ನುವುದು Folk ಮತ್ತು lore ಎಂಬ ಎರಡು ಪ್ರತ್ಯೇಕ ಅರ್ಥವನ್ನು ಹೊಂದಿದ ಪದವಾಗಿದೆ. Folk ಎಂದರೆ 'ಜನ' Lore ಎಂದರೆ 'ಜ್ಞಾನ – ಸಂಪ್ರದಾಯ' ಎನ್ನುವ ಅರ್ಥ ಹೊಂದಿವೆ. ಹೀಗೆ Folklore ಗೆ 'ಜಾನಪದ'ವನ್ನು, Folk Literature ಗೆ ಈ 'ಜನಪದ ಸಾಹಿತ್ಯ'ವೆಂಬ ಕನ್ನಡ ಪದಗಳನ್ನು ಬಳಸಲಾಗಿದೆ. Folklore ಎಂಬ ಪದವನ್ನು 1946 ರಲ್ಲಿ W.J. ಥಾಂಸ್ ಎಂಬುವನು ಮೊಟ್ಟ ಮೊದಲು ಬಳಸಿದನು. ಅದಕ್ಕಿಂತ ಮೊದಲು Popular antiquities ಎಂಬ ಪದವನ್ನು ಬಳಸುತ್ತಿದ್ದರು. ಅಂದರೆ ಮನುಷ್ಯನ ಬದುಕಿನೊಂದಿಗೆ ಅವಿನಾಭಾವ ಸಂಬಂದವನ್ನು ಹೊಂದಿ, ತಲೆ–ತಲೆಮಾರುಗಳಿಂದ ಮೌಖಿಕ ಪರಂಪರೆಯಲ್ಲಿ ಜ್ಞಾನವನ್ನು ಹೊಂದಿರುವುದೇ ಜಾನಪದ. ಜಾನಪದವನ್ನು ಕುರಿತು ಹಲವು ವಿದೇಶಿ ಮತ್ತು ಭಾರತೀಯ ವಿದ್ವಾಂಸರು ತಮ್ಮದೇ ಆದ ವ್ಯಾಖ್ಯಾನವನ್ನು ನೀಡಿದ್ದಾರೆ. ಇ.ಡಬ್ಲ್ಯೂ ವೋಗೆಲಿನ್ ರವರು ಮೌಖಿಕ ಸಂಪ್ರದಾಯಗಳಲ್ಲಿ ಸಾಗಿ ಬಂದ ಯಾವುದೇ ಪರಂಪರಾನುಗತ ವಿಷಯವಾಗಿರುವ ಪದ್ಯ ಮತ್ತು ಗದ್ಯ ವಿಷಯವಾಗಿರಲಿ ಅದುವೇ ಜಾನಪದ ಎನ್ನುತ್ತಾರೆ. ಈತ ಜಾನಪದದ ಮೂಲಗುಣ ಮೌಖಿಕ ಪ್ರಸರಣ ಎಂದು ಸ್ಪಷ್ಟಪಡಿಸಿದ್ದಾನೆ. ಅಲೆನ್‌ಡಂಟನ್ ರವರು ಪುರಾಣ, ಐತಿಹ್ಯ, ಕಥೆ, ಒಗಟುಗಳು ಇತ್ಯಾದಿ ಕಲಾತ್ಮಕಗಳ ಅಭಿವ್ಯಕ್ತಿಯೇ ಜಾನಪದ ಎಂದು ಹೇಳಿದ್ದಾರೆ. ಹಾ.ಮಾ.ನಾಯಕ ರವರು ಜಾನಪದ ಲಿಖಿತ ದಾಖಲೆಗಿಂತ ಜನತೆಯ ಗ್ರಂಥಸ್ಥವಲ್ಲದ ಸಾಂಪ್ರದಾಯಿಕ ಮೊತ್ತ, ಸಂಪ್ರದಾಯವನ್ನು ಕುರಿತಾದ ವಿಜ್ಞಾನ. ಯಾವುದೇ ಸಮಾಜದ ವಾಚಕ ಪರಂಪರೆಗಳ ಕಲೆ ಮತ್ತು ನಂಬಿಕೆಗಳ ಮೊತ್ತ ಎಂಬುದಾಗಿ ಹೇಳಿದ್ದು, ದೇ.ಜ.ಗೌ ರವರು ಬಾಲ ಬಾಯಲ್ಲಿ ಬ್ರಹ್ಮಾಂಡವು ಅಡಗಿರುವಂತೆ ಜಾನಪದದಲ್ಲಿ ಎಲ್ಲವು ಅಡಗಿದೆ ಎಂದು ಜಾನಪದದ ಮೂಲ ವ್ಯಾಪ್ತಿಯ ಕುರಿತು ತಿಳಿಸಿದ್ದಾರೆ.

**ಭಾರತದಲ್ಲಿ ಜಾನಪದ ಅಧ್ಯಯನ**

ಭಾರತದಲ್ಲಿ ಜನಪದ ಅಧ್ಯಯನ ಪ್ರಾರಂಭವಾದದ್ದೇ ವಿದೇಶಿಯರಿಂದ. ಅಬ್ಬೆಡುಬಾಯಿಸ್ ಎಂಬ ಫ್ರೆಂಚ್ ಧರ್ಮ ಪ್ರಚಾರಕ 1806ರಲ್ಲಿ ದಕ್ಷಿಣ ಭಾರತದ ವಿವಿಧೆಡೆಯ ಜನರ ನಂಬಿಕೆಗಳು, ಆಚರಣೆಗಳು, ಹಬ್ಬಗಳನ್ನು ಕುರಿತು ಫ್ರೆಂಚ್ ಭಾಷೆಯಲ್ಲಿ ಕೃತಿ ರಚಿಸಿದನು. ಅದು 1826ರಲ್ಲಿ ಇಂಗ್ಲಿಷ್‌ಗೆ ಅನುವಾದಗೊಂಡಿತು. ಹಾಗೆಯೇ ಕರ್ನಲ್‌ಟೋಡ್ ಎಂಬುವನು ರಾಜಸ್ಥಾನದ ಐತಿಹ್ಯ ಜನಪದ ನಂಬಿಕೆ, ಆಚರಣೆಗಳನ್ನು 1829 ರಲ್ಲಿ ಪ್ರಕಟಿಸಿದ. 19ನೇ ಶತಮಾನದ ಉತ್ತರಾರ್ಧದಲ್ಲಿ ಬಂಗಾಳ, ಮಹಾರಾಷ್ಟ್ರ, ಪಂಜಾಬ್, ಕಾಶ್ಮೀರ ರಾಜ್ಯಗಳ ಜಾನಪದಕ್ಕೆ ಸಂಬಂಧಿಸಿದ ಕೆಲಸಗಳನ್ನು ವಿದೇಶಿ ವಿದ್ವಾಂಸರು ಮಾಡಿದರು. ಜಾನಪದಕ್ಕೆ ಸಂಬಂಧಿಸಿದ ಕೃತಿ ರಚಿಸಿದ ಮೊದಲ ಭಾರತೀಯರೆಂದರೆ ಗುರುವಾಯೂರಿನ ರವಿಪತಿ ಎಂಬುವರು. ಇವರು ತೆಲುಗು ಗಾದೆಗಳ ಸಂಗ್ರಹವೊಂದನ್ನು 1868 ರಲ್ಲಿ ಇಂಗ್ಲಿಷ್‌ನಲ್ಲಿ ಪ್ರಕಟಿಸಿದರು.

**ಕನ್ನಡ ಜಾನಪದ ಅಧ್ಯಯನ**

ಕನ್ನಡ ಶಬ್ದಕೋಶ ರಚಿಸಿದ ರೆವರೆಂಡ್ ಫರ್ಡಿನಾಂಡ್ಕಿಟ್ಟೆಲ್ ಅವರು ಕನ್ನಡ ನಾಡಿನ ಜಾನಪದ ನಂಬಿಕೆ, ಆಚರಣೆ, ಗಾದೆಗಳನ್ನು ಕುರಿತು ಮೊಟ್ಟ ಮೊದಲು ಅಧ್ಯಯನ ನಡೆಸಿದರು. ಇವರು ತಮ್ಮ ಅರ್ಥಕೋಶದಲ್ಲಿ ಸುಮಾರು 4000 ಕನ್ನಡ ಗಾದೆಗಳನ್ನು ಉದಾಹರಿಸಿದ್ದಾರೆ. ಕೊಡವರ ಮದುವೆ, ಸಂಪ್ರದಾಯಗಳು, ಮಾಸ್ತಿಕಲ್ಲುಗಳು, ಐತಿಹ್ಯಗಳನ್ನು ಕುರಿತು ಲೇಖನ ಬರೆದಿದ್ದಾರೆ. 1885 ರಿಂದ ಇಂಡಿಯನ್ ಆಂಟಿಕ್ವರಿ ಪತ್ರಿಕೆಯಲ್ಲಿ ಫ್ಲೀಟರ ಲಾವಣಿಗಳು ಪ್ರಕಟವಾದವು. 1874 ರಲ್ಲಿ ಕರ್ನಲ್ ಮೆಕೆಂಜಿಯವರು ಕರ್ನಾಟಕ ಗ್ರಾಮದೇವತೆಯ ಹಬ್ಬವೊಂದರ ಕುರಿತಾಗಿ ಲೇಖನ ಬರೆದರು. 1912 ರಲ್ಲಿ 'ಲಾವಣಿ ಪದಗಳು,' 1939 ರಲ್ಲಿ 'ಗರತಿಯ ಹಾಡು,' 1928 ರಲ್ಲಿ ಆನಂದಕಂದರು 'ಹಳ್ಳಿಯ ಹಾಡುಗಳು' ಎಂಬ ದೀರ್ಘ ಲೇಖನ ಬರೆದರು. 1919 ರಲ್ಲಿ ಮಾಸ್ತಿಯವರು ಪ್ರಕಟಿಸಿದ 'ಕನ್ನಡ ಲಾವಣಿ ಸಾಹಿತ್ಯ' ಲೇಖನವೂ ಪ್ರಮುಖವಾದದ್ದು. ಹಾಗೆಯೇ ಹಲಸಂಗಿ ಚೆನ್ನಮಲ್ಲಪ್ಪ ಗಲಗಲಿ, ಸಿಂಪಿ ಲಿಂಗಣ್ಣ, ಕಾಪಸೆ, ದೇವುಡು, ಎಂ.ಎಸ್.ಸುಂಕಾಪುರ, ದೇಜಗೌ, ಎಲ್.ಆರ್.ಹೆಗಡೆ, ಹಾ.ಮಾ.ನಾಯಕ, ವಿವೇಕ ರೈ, ಸೋಮಶೇಖರ ಇಮ್ರಾಪುರ, ಎಚ್.ಎಲ್.ನಾಗೇಗೌಡ, ಸಿ.ಪಿ.ಕೆ. ಮೊದಲಾದವರು ಕರ್ನಾಟಕದ ವಿವಿಧೆಡೆಗಳಿಂದ ವಿವಿಧ ಬಗೆಯ ಜನಪದ ಹಾಡುಗಳನ್ನು ಸಂಗ್ರಹಿಸಿದರು. ಡಾ.ಬಿ.ಎಸ್. ಗದ್ದಗೀನಮಠ ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 'ಕನ್ನಡ ಜಾನಪದ ಗೀತೆಗಳು' ಎಂಬ ಮಹಾಪ್ರಬಂಧಕ್ಕೆ 1955ರಲ್ಲಿ ಪಿಎಚ್.ಡಿ. ಪದವಿಯನ್ನು ನೀಡಿತು. ಈಗಂತೂ ಶಿಗ್ಗಾವಿಯ ಗೊಟಗೇರಿಯಲ್ಲಿ ಮೊಟ್ಟ ಮೊದಲ ಜನಪದ ವಿಶ್ವವಿದ್ಯಾಲಯವೇ ಸ್ಥಾಪನೆಗೊಂಡಿದೆ.

**ಜನಪದ ಸಾಹಿತ್ಯದ ಪ್ರಮುಖ ಲಕ್ಷಣಗಳು**

ಜಾನಪದವು ತನ್ನದೇ ಆದ ಮೂಲಭೂತ ಲಕ್ಷಣಗಳನ್ನು ಹೊಂದಿದೆ. ಅವುಗಳೆಂದರೆ 1) ಜನಪದವು ಮೌಖಿಕವಾದದ್ದು, 2) ಜೀವಂತ ಪಳಿಯುಳಿಕೆ, 3) ಪರಂಪರೆಯಿಂದಕೂಡಿದ್ದು, 4) ಜನಪದವು ಸಂಸ್ಕೃತಿಯಒಂದು ಭಾಗ, 5) ಸರಳತೆ ಮತ್ತು ಸ್ಪಷ್ಟತೆಯಿಂದಕೂಡಿದ್ದು ಹಾಗೂ 6) ಪರಿವರ್ತನಾಶೀಲವಾದದ್ದು.

**ಕನ್ನಡ ಜನಪದ ಸಾಹಿತ್ಯದ ಪ್ರಕಾರಗಳು**

ಕನ್ನಡ ಜನಪದ ಸಾಹಿತ್ಯದ ಪ್ರಕಾರಗಳನ್ನು ಸೀಮಿತವಾದ ವ್ಯಾಪ್ತಿಯಲ್ಲಿ ವ್ಯಾಖ್ಯಾನಿಸಲು ಸಾಧ್ಯವಾಗುವುದಿಲ್ಲ. ಆದರೂ ಹಲವಾರು ಜನಪದ ವಿದ್ವಾಂಸರು ಅದರ ಪ್ರಕಾರಗಳನ್ನು ಸ್ಥೂಲವಾಗಿ ವ್ಯಾಖ್ಯಾನಿಸಿದ್ದಾರೆ. ಜಾನಪದದಲ್ಲಿ ಗ್ಧದೆ, ಒಗಟು, ಜನಪದಕಥೆ, ಜನಪದಗೀತೆ, ಒಡಪು, ಜನಪದ ಮಹಾಕಾವ್ಯ ಎಂಬ ಪ್ರಮುಖ ಪ್ರಕಾರಗಳನ್ನು ಕಾಣಬಹುದಾಗಿದೆ.

**ಗಾದೆ**

ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ನಾಣ್ಣುಡಿಯಂತೆ ಗಾದೆಗೆ ಕನ್ನಡ ಜಾನಪದ ಸಾಹಿತ್ಯದಲ್ಲಿ ತನ್ನದೇಯಾದ ಸ್ಥಾನವಿದೆ. ಗಾದೆಗಳು ಅನುಭವದ ಖಜಾನೆ ಮಾತ್ರವಲ್ಲ, ನೀತಿಯನ್ನು ಒಳಗೊಂಡ ರಮ್ಯಕಥೆಗಳು ಆಗಿವೆ. ಸಂಭಾಷಣೆಯ ಸವಿಯೂಟದಲ್ಲಿ ಗಾದೆಗಳೆ ಉಪ್ಪಿನಕಾಯಿ, ಪಲ್ಯಗಳು ಎಂದು ಹೇಳಿದರೆ ತಪ್ಪಾಗದು. ಗಾದೆ ಎಂಬ ಪದವು ಆಂಗ್ಲ ಭಾಷೆಯ Proverb ಎಂಬ ಪದದಿಂದ ಬಂದಿದೆ. ಸಂಸ್ಕೃತದ ಗಾಥಾ ಎಂಬ ಪದದ ತದ್ಭವ ರೂಪವೇ ಗಾದೆಯಾಗಿದೆ. ಅಚ್ಚಗಡದ ನಾಣ್ಣುಡಿಯನ್ನು ಮರೆಸುವಷ್ಟರ ಮಟ್ಟಿಗೆ ಗಾದೆ ಜನಪ್ರಿಯತೆ ಗಳಿಸಿದೆ. ಉದಾ;– *"ಆಸರಕಿ ಬ್ಯಾಸರಕಿ ಅಂತ ತವರಿಗಿ ಹೊದ್ರ, ತೌಡಕುಟ್ಟಕಚ್ಚಿದ್ರು"*

*"ಮನಿಗೋದ್ರ ಮಜ್ಜಿಗೆ ಕಡದೋಳು, ಹೇಳಿ ಕಳಿಸಿದ್ರ ಹಾಲು ಕೊಟ್ಟಾಳ"*

**ಒಗಟು**

ಒಗಟುಗಳು ವೇದಗಳ ಕಾಲದಲ್ಲಿ 'ಪ್ರಹೇಲಿಕಾ' ಎಂಬ ಹೆಸರಿನಿಂದ ಬಳಕೆಯಲ್ಲಿದ್ದವು. ಇದು

ಇಂಗ್ಲಿಷ್‌ನ 'Riddle' ಎಂಬ ಪದದಿಂದ ಬಂದಿದೆ. ಅಂದರೆ 'To give advice' ಎಂಬ ಅರ್ಥ ನೀಡುತ್ತದೆ. ಕನ್ನಡದಲ್ಲಿ ಒಗಟು, ಒಂಟು ಎಂಬ ಪದಗಳು ಬಳಕೆಯಲ್ಲಿವೆ. ಸಾಮಾನ್ಯವಾದ ಪರಿಭಾಷೆಯಲ್ಲಿ ಒಗಟು ಎಂದರೆ ಕಷ್ಟಕರವಾದುದು, ಗೂಢವಾದುದು, ಸುಲಭವಾದುದಲ್ಲ ಎಂದರ್ಥ. ಜನಪದರ ಬುದ್ಧಿಶಕ್ತಿಯ ಮಾಪಕವಾಗಿ ಒಗಟುಗಳು ಬಳಕೆಯಾಗುತ್ತಿದ್ದವು. ಒಬ್ಬ ಪ್ರಶ್ನೆ ಕೇಳಿದರೆ, ಇನ್ನೊಬ್ಬ ಉತ್ತರಿಸುತ್ತಾನೆ. ಒಬ್ಬ ಸಾವಿರಾರು ಒಗಟುಗಳನ್ನು ಹೇಳುವ ವ್ಯಕ್ತಿಯ ಬುದ್ಧಶಕ್ತಿಯನ್ನು ಜನಪದರು ಗೌರವಿಸುತ್ತಾರೆ.

ಉದಾ:

*ಚೋಟುದ್ದ ಹುಡುಗಿಗೆ ಮಾರುದ್ದ ಜಡೆ*– ***ತೆಂಗು***

*ಅಪ್ಪನಿಗೆ ಮೂರು, ಅವ್ವನಿಗಿ ಒಂದು* – ***ವಿಭೂತಿ, ಕುಂಕುಮ***

*ಸತ್ತ ಮುದುಕನ್ನ ಸಂತೆಗೆ ಹೊತ್ತಕೊಂಡೋದ್ರು* – ***ಮೀನು***

**ಜನಪದ ಕಥೆ**

ಕಥೆ ಇಲ್ಲದ ಊರಿಲ್ಲ, ವ್ಯಥೆಯಿಲ್ಲದ ಮನುಷ್ಯರಿಲ್ಲ ಎಂಬ ಮಾತಿನಂತೆ ಕಥೆಗಳು ಸರ್ವವ್ಯಾಪಿಯಾಗಿವೆ. ಖ್ಯಾತ ಜನಪದ ವಿದ್ವಾಂಸರಾದ ಸ್ಮಿತ್ ಥಾಂಸನ್ ಜನಪದ ಕಥೆಗಳನ್ನು ಕುರಿತು "*The Story which has been handed down from generation to generation by word of mouth*" ಎಂದು ವ್ಯಾಖ್ಯಾನಿಸಿದ್ದಾರೆ. ಆದರೆ ಕನ್ನಡದಲ್ಲಿ ಅಜ್ಜಿಕಥೆ, ಅಡುಗೊಲಜ್ಜಿಕಥೆ, ಕಟ್ಟುಕಥೆ ಇತ್ಯಾದಿ ಪದಗಳನ್ನು ಸಂವಾದಿಯಾಗಿ ಬಳಸಬಹುದು. ಕಥೆಗಳಲ್ಲಿ ಕಲ್ಪನೆಗೆ ಪ್ರಾಧಾನ್ಯತೆಯಿದ್ದು, ಬೇರೆ ಬೇರೆ ಪ್ರಕಾರಗಳಲ್ಲಿ, ಕಲ್ಪನೆಯಲ್ಲಿ ವ್ಯತ್ಯಾಸಗಳಾಬಹುದು. ಇಲ್ಲಿ ವಾಸ್ತವ ಅಂಶಗಳೊಂದಿಗೆ ಕಾಲ್ಪನಿಕ ಅಂಶಗಳು ಯಾವುದೇ ಬೇಧವಿಲ್ಲದೆ ಬೆರೆತು ಹೋಗಿರುತ್ತವೆ. ಮಾತನಾಡುವ ಪ್ರಾಣಿಗಳು, ವರ್ತಿಸುವ ನಿರ್ಜೀವ ವಸ್ತುಗಳು, ರಾಕ್ಷಸ, ದೆವ್ವ, ಬೇತಾಳ, ಕಿನ್ನರ, ಯಕ್ಷಿಣಿ ಎಂಬ ಕಾಲ್ಪನಿಕ ಅತಿಮಾನುಷ ಜೀವಿಗಳು, ಮಾಟಗಾತಿಯರು, ಸಾಧು–ಸಚಿತರು ಇಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಜನಪದ ಕಥೆಗಳಲ್ಲಿ ಕಟ್ಟು ಕಥೆಗಳು, ರಮ್ಯ ಕಥೆಗಳು, ನೀತಿ ಕಥೆಗಳು, ಹಾಸ್ಯ ಕಥೆಗಳು, ಪ್ರಾಣಿ ಕಥೆಗಳು ಮುಂತಾದ ಪ್ರಕಾರಗಳನ್ನು ಕಾಣಬಹುದು.

**ಜನಪದ ಗೀತೆ**

ಕನ್ನಡದಲ್ಲಿ ಜನಪದ ಗೀತೆಗಳನ್ನು ಹಳ್ಳಿಪದ, ಹಳ್ಳಿಹಾಡು, ಲೋಕಗೀತೆ ಮುಂತಾದ ಹೆಸರುಗಳಿಂದ ಕರೆಯುವರು. ಜನಪದ ಗೀತೆಗಳು ಜನಪದ ಸಂಸ್ಕೃತಿಯ ಒಂದು ಅಂಗವೇ ಆಗಿವೆ. ಭಾವಗೀತೆಯ ಸ್ವರೂಪ ಹೊಂದಿರುವ ಜನಪದ ಗೀತೆಗಳು ಸರಳವಾದ ರಚನೆ, ಲಲಿತವಾದ ಶೈಲಿಯಿಂದ ಕೂಡಿದ್ದು, ಬಹುತೇಕ ತ್ರಿಪದಿ ಸಾಹಿತ್ಯದಲ್ಲಿವೆ. ಜನಪದ ಗೀತೆಗಳು ಕ್ರಿಯಾತ್ಮಕವಾದವು, ನಿರ್ದಿಷ್ಟವಾದ ಸಮಯದಲ್ಲಿ ಹಾಡುವಂತವು. ಉದಾ–ಮದುವೆ, ಸೀಮಂತ, ಒಸಗೆ, ಹಬ್ಬ, ಮರಣ ಇತ್ಯಾದಿ. ಸಾಮಾನ್ಯವಾಗಿ ಜನಪದ ಗೀತೆಗಳಲ್ಲಿ ಲಾವಣಿ, ತ್ರಿಪದಿ, ಬೀಸುವ ಹಾಡುಗಳು, ಕುಟ್ಟುವ ಹಾಡುಗಳು, ಹಂತಿ ಪದಗಳು, ಚೌಡಕಿ ಪದಗಳು, ನಾಟಿಯ ಹಾಡು, ಲಾಲಿಯ ಹಾಡು, ಅಂಟಿಗೆ ಪಂಟಿಗೆಯ ಹಾಡು, ಮದುವೆ ಹಾಡು ಮುಂತಾದ ವಿಧಗಳನ್ನು ಕಾಣಬಹುದು.

ಉದಾ:

*"ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗಿ ಜಲ್ಲಜಲ್ಲನೆ ಉದುರಮ್ಮ"*

*"ಕೆಂಪ ಹೆಂಡ್ತಿಯೆಂದು ಮನದಾಗ ಖುಶಿ ಪಡಬ್ಯಾಡ*

*ಹತ್ತಿಯ ಹಣ್ಣು ಬಲು ಕೆಂಪು। ನನ ಮಗನೇ*

*ಒಡೆದು ನೋಡಿದರ ಹುಳುಬಾಳ"*

**ಒಡಪು**

ಒಡಪುಗಳು ಜನಪದ ಸಾಹಿತ್ಯದ ಒಂದು ಅಂಗ. ಇವು ವಿಪುಲವಾಗಿ ಬೆಳೆಯದೇ ಇದ್ದರೂ ಕಲ್ಪನೆ

ಹಾಗೂ ಚತುರತೆಯಿಂದ ಇಂದಿಗೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. ಉತ್ತರ ಕರ್ನಾಟಕದಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ಒಡಪುಗಳನ್ನು ಮದುವೆಯ ಸಮಯದಲ್ಲಿ ಗಂಡ ಹೆಂಡತಿಯ ಹೆಸರನ್ನು, ಹೆಂಡತಿ ಗಂಡನ ಹೆಸರನ್ನು ಹೇಳಲು ಬಳಸುತ್ತಿದ್ದರು. ನವದಂಪತಿಗಳು ಒಡಪನ್ನು ಬಳಸಿಯೇ ಹೇಳುತ್ತಾರೆ. ಹೇಳದೇ ಇದ್ದರೇ ಕೇಳುವವರು ಬಿಡುವದಿಲ್ಲ. ಇಲ್ಲಿ ಗಂಡು ಹೆಣ್ಣುಗಳನ್ನು ಛೇಡಿಸಿ, ವ್ಯಂಗವಾಡಿ ಹೆಸರು ಹೇಳುವ ಬಗೆ ಪರಸ್ಪರರನ್ನು ಕೆಣಕಿಸುತ್ತವೆ. ನವದಂಪತಿಗಳ ಮಧ್ಯೆ ಇರುವ ಸಂಕೋಚ ದೂರವಾಗಲೂ ಇವು ಸಹಕಾರಿಯಾಗಿದ್ದವು

ಉದಾ:

*ಹಂಡೆ ಸಂದೀಲಿ ಕುಂತಕೊಂಡುಉಂಡೆ ತಿನ್ತಳೆ – ಮಲ್ಲಿ*

*ಸಪ್ಪಳಿಲ್ದಂಗ ಹಪ್ಪಳ ತಿಂತಾಳ – ಬಂಗಾರಿ*

*ಹೊಲದಾಗ ಕರಕಿ ಬಾವಿ ಮ್ಯಾಲ ಗಿರಕಿ ನನಗಿಂತ ನಮ್ಮವರ ಬೆರಕಿ – ನಿಂಗಪ್ಪ*

**ಜನಪದ ಮಹಾಕಾವ್ಯ**

ಮಹಾಕಾವ್ಯಗಳು ಕೂಡ ಜನಪದ ಸಾಹಿತ್ಯದ ಅವಿಭಾಜ್ಯ ಅಂಗಗಳಾಗಿದ್ದು ಗ್ರೀಕ್‌ನ್ ಇಲಿಯಡ್ ಮತ್ತು ಒಡಸ್ಸಿ, ಫಿನ್‌ಲ್ಯಾಂಡಿನ ಕಲೇವಾಲ, ಭಾರತದ ರಾಮಾಯಣ, ಮಹಾಭಾರತ ಮುಂತಾದವು ಜನಪದ ಮಹಾಕಾವ್ಯಗಳಿಗೆ ಉತ್ತಮ ಉದಾರಣೆಗಳು ಎಂದು ಹೇಳಬಹುದು. ಜನಪದ ಮಹಾಕಾವ್ಯಗಳು ನೂರಾರು ವರ್ಷಗಳ ಹಿಂದೆ ಸೃಷ್ಟಿಯಾಗಿ ಕ್ರಮೇಣವಾಗಿ ಬೆಳೆದು ಬಂದಿವೆ. ಜನಪದ ಮಹಾಕಾವ್ಯಗಳ ಮೂಲ ಕರ್ತೃ ಯಾರು ಎಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಕನ್ನಡದ ಮಟ್ಟಿಗೆ 'ಜಿಶಂಪ' ರವರು ತಮ್ಮ 'ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು' ಎಂಬ ಕೃತಿಯಲ್ಲಿ ಅನೇಕ ಮಹಾಕಾವ್ಯಗಳನ್ನು ಗುರುತಿಸಿದ್ದಾರೆ.

ಉದಾ: *ಮಲೆಯ ಮಹದೇಶ್ವರ ಕಾವ್ಯ, ಮಂಟೇಸ್ವಾಮಿಯ ಕಾವ್ಯ, ಜುಂಜಪ್ಪನ ಕಾವ್ಯ* .

ಇಂತಹ ಜನಪದ ಸಾಹಿತ್ಯ ನಮ್ಮ ಸಂಸ್ಕೃತಿಯ ಪ್ರತೀಕ. ಒಂದು ಕಾಲಕ್ಕೆ ಇವೇ ಜನರ ಸಮೂಹ ಮಾಧ್ಯಮಗಳಾಗಿದ್ದವು. ಒಂದು ಕಾಲದಲ್ಲಿ ಮಹಾನದಿಯಾಗಿ ಮೆರೆದ ಜನಪದ ಸಾಹಿತ್ಯ ಇಂದು ಜಾಗತೀಕರಣದ ಹೆಸರಿನಲ್ಲಿ ಮರೆಯಾಗುತ್ತಿದ್ದು, ಇಂತಹ ಜನಪದ ಸಾಹಿತ್ಯವನ್ನು ಉಳಿಸಿ, ಬೆಳೆಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ನಿಂಗಣ್ಣ, ಚಿ.ಸಿ. (ಸಂ.). (2017). ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ. ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ
- ವೀರಣ್ಣ ದಂಡೆ. (2015). *ಜಾನಪದ.* ಕನ್ನಡ ಸಾಹಿತ್ಯ ಪರಿಷತ್.
- ಶಂಭು ಬಳಿಗಾರ ಮತ್ತು ಶ್ರೀಶೈಲ ಹುದ್ದಾರ. *ಜನಪದ ಸಾಹಿತ್ಯ ಮತ್ತು ಬಯಲಾಟ ಸಂಗ್ರಹ*
- ಕೊಕ್ಕನವರ, ವಾಯ್.ವಾಯ್. *ಕನ್ನಡ ಸಾಹಿತ್ಯ ಚರಿತ್ರೆಯ ಹೆಜ್ಜೆಗಳು*